ಮಂಗಳೂರು ತೈಲ ಶುದ್ಧೀಕರಣಗಾರ ಸ್ಥಾಪನೆ ಕುರಿತು

೨೦೬೨. ಶ್ರೀ ಬಿ. ಎಂ. ಇದಿನಬ್ಬ(ಉಳ್ಳಾಲ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮಂಗಳೂರು ತೈಲ ಶುದ್ಧೀಕರಣಗಾರ ಸ್ಥಾಪನೆ ಯಾವಾಗ ಪ್ರಾರಂಭವಾಗುವುದು ;

ಆ) ಇದಕ್ಕೆ ತಗಲುವ ಒಟ್ಟು ಖರ್ಚಿನ ಅಂದಾಜು ಎಷ್ಟು !

ಇ) ಇದಕ್ಕೆ ಬೇಕಾದ ವಿದ್ಯುತ್, ನೀರು ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ರಾಜ್ಯ ಸರಕಾರ ಪೂರೈಸುವುದೇ ;

ಈ) ಇದಕ್ಕಾಗಿ ಪಶಪಡಿಸುವ ಭೂಮಿಯೆಷ್ಟು ; ಹಾಗೂ ಅದರ ಸ್ಥಳ ಯಾವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).

ಅ) ನಿರ್ದಿಷ್ಟವಾಗಿ ಹೇಳುವುದು ಸಧ್ಯಕ್ಕೆ ಸಾಧ್ಯವಾಗಲಾರದು.

ಆ) ತೀರದು ಬಂದಿರುವ ಅಂಕಿ ಅಂಶಗಳ ಪ್ರಕಾರ ಸುಮಾರು ೧,೨೦೦ ಕೋಟಿ ರೂ.ಗಳು

ಇ) ಪೂರೈಸಲಾಗುವುದು.

ಈ) ಇದಕ್ಕಾಗಿ ಪಶಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ ೧,೬೬೯ ಎಕರೆ ೭೫ ಸೆಂಟುಗಳು. ಈ ಕೆಳಗಿನ ಸ್ಥಳಗಳಲ್ಲಿ ಕುತೇತ್ತೂರು, ತೋಕೂರು, ಕಾಳವಾರ, ಬಾಲ, ಪೆರ್ಮುದೆ ಸರ್ವಾಡಿ.

ಹೊಸನಗರ ತಾಲ್ಲೂಕು ಪರಾಹಿ ಮಂಳಂಗಡೆ ಪ್ರದೇಶದ ಬಗ್ಗೆ

೨೩೬. ಶ್ರೀ ಬಿ. ಸ್ವಾಮಿರಾವ್ (ಹೊಸನಗರ) — ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕಿನ ಪರಾಹಿ ಮುಳುಗಡೆ ಪ್ರದೇಶದಲ್ಲಿದ್ದ ನಾಟಾ ಕಟ್ಟಿಗೆ ಎಷ್ಟು ?

ಆ) ಮುಳುಗಡೆ ಪ್ರದೇಶದಲ್ಲಿದ್ದ ವಿವಿಧ ಜಾತಿಯ ಮರಗಳು ಎಷ್ಟು ? ಆ ಪೈಕಿ ಬೀಟಿ ಮರಗಳು ಎಷ್ಟು ?

ಇ) ಇದರಿಂದ ಸರ್ಕಾರದ ಬೊಕ್ಕಸಕ್ಕಾದ ಆದಾಯ ಮತ್ತು ಖರ್ಚೆಷ್ಟು ?

ಈ) ಸದರಿ ಪ್ರದೇಶದ ರೈತರ ಖಾಸಗಿ ಜಮೀನಿನಲ್ಲಿರುವ ನಾಟಾ ಮರಗಳನ್ನು ಕಡಿದು ತೆಗೆಸಿದ್ದಕ್ಕೆ ಪರಿಹಾರ ಕೊಡುವವರು ಯಾರು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಪರಾಹಿ ಮುಳುಗಡೆ ಪ್ರದೇಶದಲ್ಲಿದ್ದ ಮರಗಳನ್ನು ತೆಗೆದು ಈ ಕೆಳಕಂಡ ಮೊತ್ತಗಳನ್ನು ತಯಾರು ಮಾಡಲಾಗಿದೆ.

ನಾಟಾ (ಘ.ಮೀ.)	—	೧,೭೯, ೩೭,೦೨೧
ಸೌದೆ (ಘ.ಮೀ)	—	೧೧,೬೩,೬೫೩.೬೦೭
ಇದ್ದಿಲು (ಚೀಲಗಳಲ್ಲಿ ಸಂಖ್ಯೆ)	—	೮,೯೬,೨೪೭
ಸ್ಲೀಪರುಗಳು (ಸಂಖ್ಯೆ)		
ಬ್ರಾಡ್‌ಗೇಜ್	—	೭೪,೭೫೪
ಮೀಟರ್ ಗೇಜ್	—	೩೭,೯೧೧

ಆ) ವಿವಿಧ ಜಾತಿಯ ಮರಗಳ ಸಂಖ್ಯೆ ೪,೭೭.೫೦೦
ಆ ಪೈಕಿ ಬೀಟಿ ಮರಗಳು ೨೯ ಸಂಖ್ಯೆ ಮಾತ್ರ

ಇ) ಆದಾಯ : ರೂ. ೧೭,೯೬,೧೪,೩೪೪,೦೦

ಖರ್ಚು : ರೂ. ೩,೬೪,೭೨,೬೫೭.೦೦

೩೦-೪-೧೯೮೮ರವರೆಗೆ

ಇದಲ್ಲದೇ ರೂ. ೪೭,೯೩,೬೮೪.೧೪ ಡಿಪಾಜಿಟ್ಟಿನಲ್ಲಿ ಇದೆ. ಇದನ್ನು ಗುತ್ತಿಗೆ ಕೆಲಸ ಮುಗಿದ ಮೇಲೆ. ಸರ್ಕಾರದ ಬಾಕಿ ಏನಾದರೂ ಇದ್ದರೆ, ಅದನ್ನು ವಸೂಲಿ ಮಾಡಿ, ಉಳಿಕೆಯದನ್ನು ಗುತ್ತಿಗೆ ದಾರರಿಗೆ ಬಿಟ್ಟುಕೊಡಲಾಗುವುದು.

ಈ) ಈ ವಿಚಾರವು ಭೂ ಸ್ವಾಧೀನ ಅಧಿಕಾರಿಗಳು, ವರಾಹಿ, ಚಕ್ರ ಮತ್ತು ಸಾವೇಹಕ್ಲು, ಹೊಸನಗರ ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

೧೮೩೮. ಶ್ರೀ ಎನ್. ಬಿ. ಅಡ್ಯಂತಾಯ, (ಸುರತ್ಕಲ್).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ೧೯೮೬-೮೭ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ೨.೪೨ ಕೋಟಿ ರೂ.ಗಳ ಕೊರತೆ ಹಣಕಾಸಿನ ಲೆಕ್ಕಪತ್ರಗಳಲ್ಲಿ ಕಂಡು ಬಂದಿರುವುದು ನಿಜವೇ ? ಹಾಗಿದ್ದಲ್ಲಿ ಅವ್ಯವಹಾರಗಳಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಕೈಗೊಂಡ ಕ್ರಮಗಳೇನು ?

ಆ) ೩೦-೪-೧೯೮೭ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿರಬೇಕಾಗಿದ್ದ ಹಣದ ಮೊತ್ತ ಎಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮಂಡಳಿಯ ಗಮನಕ್ಕೆ ೫ ಅವ್ಯವಹಾರದ ಪ್ರಕರಣಗಳು ಕಂಡು ಬಂದಿರುತ್ತವೆ. ಇದರ ಒಟ್ಟು ಮೊತ್ತ ೪.೫೪ ಲಕ್ಷ ರೂ.ಗಳು ಈ ಬಗ್ಗೆ ಇತರ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ೩೦-೪-೮೭ ರಂದು ಮಂಡಳಿಯಲ್ಲಿದ್ದ ಮತ್ತು ಬ್ಯಾಂಕುಗಳಲ್ಲಿದ್ದ ಶಿಲ್ಕು ಹಣ ಒಟ್ಟು ೧೧,೬೨,೯೮,೩೫೭ ರೂ.ಗಳು.

ದೊಡ್ಡ ಮೂಲಂಗಿ ಗ್ರಾಮದಲ್ಲಿ ವಿದ್ಯುತ್ ಕಂಬ ಸ್ಥಳಾಂತರಿಸುವ ಕುರಿತು

೧೫೭೧. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ದೊಡ್ಡಮೂಲಂಗಿ ಗ್ರಾಮದ ಶ್ರೀ ದೊಡ್ಡಸಿದ್ದಪ್ಪ ಚನ್ನಬಸಪ್ಪ ರಾಮದುರ್ಗರವರ ಮನೆಯ ಮೇಲೆ ವಿದ್ಯುತ್ ತಂತಿಯು ಹಾದು ಹೋಗಿರುವುದರಿಂದ ಅಲ್ಲಿ ಜನತೆಗೆ ಹಾಗೂ ಮನೆಯವರ ಜೀವ ಅಪಾಯದ ಅಂಚಿನಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಅಪಾಯದಿಂದಿರುವ ವಿದ್ಯುತ್ ತಂತಿಯನ್ನು ಬದಲಾಯಿಸಲು ವಂನವಿ ಮಾಡಿಕೊಂಡು ಅದನ್ನು ಸ್ಥಳಾಂತರಿಸಲು ಸರ್ಕಾರಕ್ಕೆ ನೀಡಬೇಕಾದ ಹಣವನ್ನು ಸಹ ಸಂದಾಯ ಮಾಡಿ ಒಂದು ವರ್ಷ ಗತಿಸಿದರೂ ಹಾಗೂ ಕೆ.ಇ.ಬಿ. ಅಧಿಕಾರಿಗಳು ಬಂದು ಪರಿಶೀಲನೆ ಮಾಡಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿರುವುದು ನಿಜವಲ್ಲವೆ ?